

23 ವರ್ಷದೊಳಗಿನವರಿಗಷ್ಟೇ ಈ ಪರೀಕ್ಷೆಯನ್ನು ಬರೆಯಲು ಅವಕಾಶ ಒದಗಿಸಲಾಗಿತ್ತು. ಯೂರೋಪಿಯನ್ ಕ್ಲಾಸಿಕ್‌ಗಳ ಮೇಲೆಯೇ ಬಹುಪಾಲು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಹೀಗಾಗಿ ಭಾರತೀಯ ಅಭ್ಯರ್ಥಿಗಳಿಗೆ ಈ ಪರೀಕ್ಷೆ ಪಾಸು ಮಾಡುವುದು ಅತ್ಯಂತ ಕಠಿಣವಾಗಿತ್ತು. ಹೀಗಿದ್ದೂ ಈ ಪರೀಕ್ಷೆಯನ್ನು ಪಾಸು ಮಾಡಿದ ಮೊದಲ ಭಾರತೀಯರೆಂದರೆ ಕವಿ ರವೀಂದ್ರನಾಥ ಟ್ಯಾಗೋರ್ ಅವರ ಸಹೋದರ ಸತ್ಯೇಂದ್ರನಾಥ ಟ್ಯಾಗೋರ್. ಮೂರು ವರ್ಷಗಳ ನಂತರ ಮತ್ತೆ ನಾಲ್ವರು ಭಾರತೀಯರು ಆಯ್ಕೆಯಾದರು. ಆದರೆ, ಬಳಿಕ ಮುಂದಿನ ಐವತ್ತು ವರ್ಷಗಳಲ್ಲಿ ಯಾವೊಬ್ಬ ಭಾರತೀಯನೂ ನಾಗರಿಕ ಸೇವೆಗೆ ಆಯ್ಕೆಯಾಗಲಿಲ್ಲ. ಏಕೆಂದರೆ, ಬ್ರಿಟಿಷ್ ಸರ್ಕಾರ ಭಾರತೀಯರನ್ನು ಆ ಹುದ್ದೆಯಲ್ಲಿ ನೋಡಲು ಬಯಸಿರಲಿಲ್ಲ. ಮೊದಲ ಜಾಗತಿಕ ಸಮರದ ಬಳಿಕ ಆಡಳಿತ ಸೇವೆಯ ಆಯ್ಕೆ ಪ್ರಕ್ರಿಯೆಯಲ್ಲಿ ಹಲವು ಸುಧಾರಣೆಗಳನ್ನು ತರಲಾಯಿತು. ಭಾರತೀಯರಿಗೆ ನಿಧಾನವಾಗಿ ಅವಕಾಶಗಳ ಬಾಗಿಲು ತೆರೆಯಿತು. ಭಾರತದಲ್ಲಿ ಮೊದಲು ಈ ಪರೀಕ್ಷೆ ನಡೆದಿದ್ದು ಅಲಹಾಬಾದ್‌ನಲ್ಲಿ. ಆಮೇಲೆ ದೆಹಲಿಯೂ ಪರೀಕ್ಷಾ ಕೇಂದ್ರವಾಯಿತು. ದೇಶದಲ್ಲಿ ಪರೀಕ್ಷೆಗಳನ್ನು ನಡೆಸುವ ಸಲುವಾಗಿ 'ಒಕ್ಕೂಟ ಲೋಕಸೇವಾ ಆಯೋಗ'ವನ್ನು (ಎಫ್‌ಪಿಎಸ್‌ಸಿ) ಹುಟ್ಟುಹಾಕಲಾಯಿತು. ಅದೇ ಕಾಲಕ್ಕೆ ನಾಗರಿಕ ಸೇವಾ ಆಯೋಗವು ಲಂಡನ್ನಿನಲ್ಲೂ ಆಯ್ಕೆ ಪ್ರಕ್ರಿಯೆಯನ್ನು ನಡೆಸುತ್ತಿತ್ತು.

ಹಾಗೆಯೇ, ಸ್ವಾತಂತ್ರ್ಯ ಪೂರ್ವದಲ್ಲಿ 'ಇಂಡಿಯನ್ (ಇಂಪೆರಿಯಲ್) ಪೊಲೀಸ್'ನ ಅಧಿಕಾರಿಗಳನ್ನು ಬ್ರಿಟಿಷ್ ಸರ್ಕಾರದ ಕಾರ್ಯದರ್ಶಿಯವರೇ ನೇಮಿಸುತ್ತಿದ್ದರು. ಅಭ್ಯರ್ಥಿಗಳನ್ನು ಆಯ್ಕೆಮಾಡಲು ಅವರೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದ್ದರು. 1893ರ ಜೂನ್‌ನಲ್ಲಿ ಇಂತಹ ಮೊದಲ ಪರೀಕ್ಷೆ ನಡೆಯಿತು. ಅದರಲ್ಲಿ ಅಗ್ರ ಹತ್ತು ಸ್ಥಾನ ಗಳಿಸಿದವರನ್ನು ಪ್ರೊಬೇಷನರಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಗಳನ್ನಾಗಿ (ಎಸ್‌ಪಿ) ನೇಮಕ ಮಾಡಲಾಯಿತು. ಇಂಪೆರಿಯಲ್ ಪೊಲೀಸ್‌ನ ಅಧಿಕಾರಿಗಳ ಕಚೇರಿಗಳು ಭಾರತೀಯರ ಪಾಲಿಗೆ ತೆರೆದುಕೊಂಡಿದ್ದು 1920ರಲ್ಲಿ. ಇಂಗ್ಲೆಂಡ್ ಮತ್ತು ಭಾರತ ಎರಡೂ ಕಡೆ ಆಗ ಪರೀಕ್ಷೆಯನ್ನು ನಡೆಸಲಾಗುತ್ತಿತ್ತು. ಆದರೆ, ಪೊಲೀಸ್ ಇಲಾಖೆಯ ಉನ್ನತ ಹುದ್ದೆಗಳು ಬಹುಪಾಲು ಯುರೋಪಿಯನ್ನರಿಗೇ ಮೀಸಲಾಗಿದ್ದವು. ಬರುಬರುತ್ತಾ ಭಾರತಕ್ಕೆ ಹೋಗಿ ಸೇವೆ ಸಲ್ಲಿಸುವ ಯುರೋಪಿನ ಅಭ್ಯರ್ಥಿಗಳಲ್ಲಿ ಕೊರತೆ ಉಂಟಾದಾಗ ಭಾರತೀಯ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಪರಿಪಾಟವನ್ನು ಆರಂಭಿಸಲಾಯಿತು.

ಬ್ರಿಟಿಷ್ ಸರ್ಕಾರವು 1864ರಲ್ಲಿ 'ಇಂಪೆರಿಯಲ್ ಫಾರೆಸ್ಟ್

## ಐಎಎಸ್-ಐಪಿಎಸ್ ಅಷ್ಟೇ ಅಲ್ಲ!

ಯುಪಿಎಸ್‌ಸಿ ನಡೆಸುವ ನಾಗರಿಕ ಸೇವಾ ಪರೀಕ್ಷೆಯಲ್ಲಿ ಐಎಎಸ್, ಐಪಿಎಸ್ ಹುದ್ದೆಗಳನ್ನು ಮಾತ್ರ ಭರ್ತಿ ಮಾಡುವುದಿಲ್ಲ. ಒಟ್ಟಾರೆ 24 ವಿವಿಧ ಸೇವೆಗಳಿಗೆ ಈ ಪರೀಕ್ಷೆಯ ಮೂಲಕವೇ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದಲೇ ಈ ಪರೀಕ್ಷೆಗೆ ವಿಶೇಷ ಮಹತ್ವವಿದೆ. ಕಷ್ಟಪಟ್ಟು ಓದುವವರಿಗೆ ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ವಿಪುಲ ಅವಕಾಶಗಳಿವೆ. ಯಪಿಎಸ್‌ಸಿ, ಒಟ್ಟು ಮೂರು ಶ್ರೇಣಿಗಳ ಹುದ್ದೆಗಳನ್ನು ಭರ್ತಿ ಮಾಡುತ್ತದೆ. ಅವುಗಳ ವಿವರ ಹೀಗಿದೆ:

**ಅಖಿಲ ಭಾರತ ನಾಗರಿಕ ಸೇವೆಗಳು:**
ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್), ಭಾರತೀಯ ಅರಣ್ಯ ಸೇವೆ (ಐಎಫ್‌ಒಎಸ್).

'ಎ' ಶ್ರೇಣಿಯ ನಾಗರಿಕ ಸೇವೆಗಳು: ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್), ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಸೇವೆ (ಐಎಎಎಸ್), ಭಾರತೀಯ ನಾಗರಿಕ ಲೆಕ್ಕ ಸೇವೆ (ಐಸಿಎಎಸ್), ಭಾರತೀಯ ಕಾರ್ಪೊರೇಟ್ ಕಾನೂನು ಸೇವೆ (ಐಸಿಎಲ್‌ಎಸ್), ಭಾರತೀಯ ರಕ್ಷಣಾ ಲೆಕ್ಕ ಸೇವೆ (ಐಡಿಎಎಸ್), ಭಾರತೀಯ ರಕ್ಷಣಾ ಆಸ್ತಿ ಸೇವೆ (ಐಡಿಇಎಸ್), ಭಾರತೀಯ ಮಾಹಿತಿ ಸೇವೆ (ಐಐಎಸ್), ಭಾರತೀಯ ಶಸ್ತ್ರಾಸ್ತ್ರ ಕಾರ್ಖಾನೆ ಸೇವೆ (ಐಒಎಫ್‌ಎಸ್), ಭಾರತೀಯ ಸಂವಹನ ಹಣಕಾಸು ಸೇವೆ (ಐಸಿಎಫ್‌ಎಸ್), ಭಾರತೀಯ ಅಂಚೆ ಸೇವೆ (ಐಪಿಒಎಸ್), ಭಾರತೀಯ ರೈಲ್ವೆ ಲೆಕ್ಕ ಸೇವೆ (ಐಆರ್‌ಎಎಸ್), ಭಾರತೀಯ ರೈಲ್ವೆ ಸಿಬ್ಬಂದಿ ಸೇವೆ (ಐಆರ್‌ಪಿಎಸ್), ಭಾರತೀಯ ರೈಲ್ವೆ ಸಂಚಾರ ಸೇವೆ (ಐಆರ್‌ಟಿಎಸ್), ಭಾರತೀಯ ಕಂದಾಯ ಸೇವೆ (ಐಆರ್‌ಎಸ್), ಭಾರತೀಯ ವಾಣಿಜ್ಯ ಸೇವೆ (ಐಟಿಎಸ್), ರೈಲ್ವೆ ಭದ್ರತಾ ಪಡೆ (ಆರ್‌ಪಿಎಫ್).

'ಬಿ' ಶ್ರೇಣಿಯ ನಾಗರಿಕ ಸೇವೆಗಳು: ಸಶಸ್ತ್ರ ಪಡೆ (ಮುಖ್ಯ ಕಚೇರಿ ನಾಗರಿಕ ಸೇವೆ), ದೆಹಲಿ, ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ದಮನ್ ಮತ್ತು ದಿಯು, ದಾದರ್ ಮತ್ತು ನಗರ ಹವೇಲಿ ನಾಗರಿಕ ಸೇವೆ (ಡ್ಯಾನಿಕ್ಸ್–ಡಿಎಎನ್‌ಐಸಿಎಸ್), ದೆಹಲಿ, ಅಂಡಮಾನ್ ಮತ್ತು ನಿಕೋಬಾರ್ ಪೊಲೀಸ್ ಸೇವೆ (ಡ್ಯಾನಿಪ್ಸ್–ಡಿಎಎನ್‌ಐಪಿಎಸ್), ಪಾಂಡಿಚೇರಿ ನಾಗರಿಕ ಸೇವೆ, ಪಾಂಡಿಚೇರಿ ಪೊಲೀಸ್ ಸೇವೆ.